ದಿನಾಂಕಃ 05.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 1ನೇ ಎದುರುದಾರರ ಪರ ವಕೀಲರಿಂದ :**

ನಾನು 10ನೇ ತರಗತಿಯವರೆಗೆ ಓದಿರುತ್ತೇನೆ. ಹೋಟೆಲ್ ನಡೆಸುತ್ತಿರುವ ಬಗ್ಗೆ ನಾನು ಪರವಾನಗಿ ಪಡೆದಿರುತ್ತೇನೆ, ನ್ಯಾಯಾಲಯಕ್ಕೆ ಅದನ್ನು ಕೊಟ್ಟಿರುತ್ತೇನೆ. ಫೋಟೋ ಹೊರತುಪಡಿಸಿ ನಾನು ನ್ಯಾಯಾಲಯಕ್ಕೆ ಪರವಾನಗಿ ಕೊಟ್ಟಿಲ್ಲ ಎಂದರೆ ಸಾಕ್ಷಿ ಅದು ಮನೆಯಲ್ಲಿರುತ್ತದೆ ಎನ್ನುತ್ತಾರೆ, ಅವಶ್ಯವಿದ್ದರೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಕೆ.ಶೆಟ್ಟಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಸುಮಾರು 14 ವರ್ಷಗಳಿಂದ ಹೋಟೆಲ್ ನಡೆಸುತ್ತಿದ್ದೇನೆ. ಸುಮಾರು 6 ವರ್ಷಗಳ ಹಿಂದೆ ಪರವಾನಗಿ ನೀಡಿರುತ್ತಾರೆ. 1-2 ವರ್ಷಕ್ಕೊಮ್ಮೆ ಪರವಾನಗಿಯನ್ನು ಪಂಚಾಯತಿಯವರು ನವೀಕರಿಸುತ್ತಾರೆ. ನವೀಕರಿಸುವ ಸಮಯದಲ್ಲಿ ನಾವು ಪ್ರತಿವರ್ಷ ದಾಖಲೆಯನ್ನು ಪಂಚಾಯತಿಯವರಿಗೆ ಕೊಡುತ್ತೇವೆ ಎನ್ನುತ್ತಾರೆ. ಸದರಿಯವರು ಪರಿಶೀಲನೆ ಮಾಡಿ ಪರವಾನಗಿ ಕೊಡುತ್ತಾರೆ. ಯಾರಿಂದ ಏನನ್ನೂ ಖರೀದಿಸುತ್ತೇವೆಂದು ಎನ್ನುವ ಮಾಹಿತಿಯನ್ನು ಪಂಚಾಯತಿಯವರಿಗೆ ಕೊಡುತ್ತೇವೆ ಎಂದರೆ ಸರಿ. ಅದೇ ರೀತಿ ಒಂದು ಲೆಡ್ಜರ್ ನಲ್ಲಿ ಮಾಹಿತಿಯನ್ನು ಬರೆದುಕೊಂಡು ಅದನ್ನು ಆದಾಯ ತೆರಿಗೆ ಇಲಾಖೆಯವರಿಗೆ ಕೊಡುತ್ತೇವೆ ಎಂದರೆ ಸರಿ.

**2.** ಸದರಿ ಹೋಟೆಲ್ ನನ್ನ ಹೆಸರಿನಲ್ಲಿರುವುದಿಲ್ಲ, ನನ್ನ ತಂದೆಯ ಹೆಸರಿನಲ್ಲಿರುತ್ತದೆ. ನನ್ನ ತಂದೆಯ ಹೆಸರು ಜಯರಾಮ್, ಅವರು ಆರೋಗ್ಯದಿಂದ ಇರುತ್ತಾರೆ ಎಂದರೆ ಸಾಕ್ಷಿ ಅವರ ಕಾಲಿಗೆ ಗಾಯವಾಗಿರುತ್ತದೆ ಎನ್ನುತ್ತಾರೆ. ವ್ಯವಹಾರವನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಾರೆ ಎಂದರೆ ಸರಿ. ನಾನು ಸದರಿ ಹೋಟೆಲ್ ನಲ್ಲಿ ಕೆಲಸಗಾರನಾಗಿ ಮಾತ್ರ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಹೋಟೆಲಿನ ಮೇಲ್ವಿಚಾರಣೆಯನ್ನು ನನ್ನ ತಂದೆಯೇ ಮಾಡುತ್ತಿದ್ದು ಅವರು ಹೇಳಿದಂತೆ ನಾನು ಕೆಲಸ ಮಾಡಿಕೊಂಡು ಹೋಗುತ್ತಿದ್ದೆ. ನನ್ನ ತಂದೆಯೇ ವ್ಯವಹಾರ ನೋಡಿಕೊಳ್ಳುವುದರಿಂದ ನನಗೆ ಹೋಟೆಲಿನ ಲೆಕ್ಕಾಚಾರಗಳು ಗೊತ್ತಿಲ್ಲ ಎಂದರೆ ಸಾಕ್ಷಿ ನಾನೇ ಲೆಕ್ಕಾಚಾರಗಳನ್ನು ಮಾಡಿಕೊಡುತ್ತೇನೆ ಎನ್ನುತ್ತಾರೆ. ನಮ್ಮ ಹೋಟೆಲಿನ ಲೆಡ್ಜರಿನಲ್ಲಿ ಎಲ್ಲಾ ವ್ಯವಹಾರಗಳನ್ನು ಬರೆದಿರುತ್ತೇವೆ ಎಂದರೆ ಸರಿ. ಒಂದು

ಲೆಡ್ಜರ್ ಎಷ್ಟು ದಿನಕ್ಕೆ ಮುಗಿಯುತ್ತದೆ ಎಂದರೆ ವರ್ಷಕ್ಕೊಮ್ಮೆ ಮುಗಿಯುತ್ತದೆ, ಪ್ರತಿ ತಿಂಗಳು ಅದನ್ನು ನಿರ್ವಹಿಸುತ್ತೇವೆ ಎನ್ನುತ್ತಾರೆ. ಸದರಿ ಲೆಡ್ಜರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಹೋಟೆಲ್ ಪರವಾನಗಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಹೋಟೆಲ್ ಮುಂದೆ ಯಾರು ಬೇಕಾದರೂ ಫೋಟೋ ತೆಗೆದುಕೊಳ್ಳಬಹುದು. ಹೋಟೆಲ್ ಮುಂದೆ ಫೋಟೋ ತೆಗೆದುಕೊಂಡಾಗ ಅವರು ಮಾಲೀಕರಾಗುವುದಿಲ್ಲ ಎಂದರೆ ಸರಿ.

**3.** ಅರ್ಜಿದಾರರು ನಮ್ಮ ಅಕ್ಕಪಕ್ಕದ ಮನೆಯವರು. ಮೃತರು ಹೇಳಿಕೆ ನೀಡುವಾಗ ಗೃಹಿಣಿ ಎಂದು ಹೇಳಿರುತ್ತಾರೆ ಎಂದರೆ ಸರಿ. ಆ ಕಾರಣದಿಂದ ಸದರಿಯವರು ಯಾವುದೇ ಹಾಲಿನ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಯಾವುದೇ ದಾಖಲೆಯನ್ನು ನಾನು ಕೊಡದೇ ಅರ್ಜಿದಾರರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಲು ಖರೀದಿಸಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ಅರ್ಜಿದಾರರು ಅಕ್ರಮ ಲಾಭ ಪಡೆದುಕೊಳ್ಳಲು ನಾನು ಸಹಾಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಫೋಟೋಗಳನ್ನು ಪ್ರಕರಣಕ್ಕೆ ಅನುಕೂಲವಾಗಲೆಂದು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 2ನೇ ಎದುರುದಾರರ ಪರ ವಕೀಲರಿಂದ :**

1ನೇ ಎದುರುದಾರರ ಪಾಟೀ ಸವಾಲನ್ನು ಅನುಮೋದಿಸಿಕೊಂಡಿರುತ್ತಾರೆ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**